ಸಿ.ಸಿ. ನಂಬರ್ಃ **2497/2023**

ಪಿ.ಡಬ್ಲ್ಯುಃ**1**

ದಿಃ**10-07-2024** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಪಾಟೀಸವಾಲುಃ ಶ್ರೀ.ಕೆ ವಿ ಬಿ ಆರೋಪಿ ಪರ ವಕೀಲರವರಿಂದ.

ನಾನು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಅರೋಪಿಯು ನನಗೆ 8-10 ವರ್ಷಗಳಿಂದ ಪರಿಚಯ ಇದ್ದಾನೆ. ಪಿರ್ಯಾದಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆರೋಪಿಗೆ ನಾನು ಸಾಲ ಕೊಟ್ಟಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ ತಂಗಿ ನನಗೆ ಹಣವನ್ನು ಕೊಟ್ಟಿದ್ದು ಅದನ್ನು ನಾನು ಆರೋಪಿಗೆ ಕೊಟ್ಟಿರುತ್ತೇನೆ. ದಿಃ17-02-2020 ರಂದು ರೂ.6,00,000/- ಕೊಟ್ಟಿರುತ್ತೇನೆ. ದಿಃ18-09-2020 ರಂದು ನನ್ನ ಬ್ರದರ್ ಖಾತೆಯಿಂದ ರೂ.6,00,000/- ಪಡೆದುಕೊಂಡು ಆರೋಪಿಗೆ ಕೊಟ್ಟಿರುತ್ತೇನೆ. ಹಣ ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಆರೋಪಿ ಹಾಗೂ ತನಗೆ ಸಾಕಷ್ಟು ಭಾರಿ ಹಣದ ವ್ಯವಹಾರ ಆಗಿದ್ದು 6 ತಿಂಗಳಲ್ಲಿ ಹಣ ಕೊಡುವುದಾಗಿ ಹೇಳಿದ ಬಗ್ಗೆ ನುಡಿಯುತ್ತಾರೆ. ನನ್ನ ಪಿರ್ಯಾದಿಯ ಪ್ಯಾರಾ ನಂ.4 ಮತ್ತು 5 ರ ಪ್ಯಾರಾ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹಣ ಕೊಡುವ ಕಾಲಕ್ಕೆ ಯಾವುದೇ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ, ನಂಬಿಕೆಯ ಮೇಲೆ ಮಾಡಿಕೊಂಡಿರುವುದಾಗಿ ಹೇಳುತ್ತಾರೆ.

ನಾನು ನೌಕರಸ್ಥ ಇದ್ದು , ನಾನು ಸಂಬಳವನ್ನು ಬ್ಯಾಂಕ್ ಖಾತೆಯ ಮೂಲಕ ಪಡೆದುಕೊಳ್ಳುತ್ತೇನೆ ಎಂದರೆ ಸರಿ. ದಿಃ10-06-2023 ರಂದು ನಾನು ಹಾಗೂ ನನ್ನ ಗೆಳೆಯ ಅವರ ಮನೆಗೆ ಹೋಗಿರುತ್ತೇವೆ. ಆಗ ದಿಃ15-06-2023 ರ ಚೆಕ್ ನ್ನು ನನಗೆ ಕೊಟ್ಟಿರುವುದಾಗಿ ಹೇಳುತ್ತಾರೆ. ಅದೇ ದಿನಾಂಕದಂದು ನನ್ನ ಖಾತೆಗೆ ಜಮಾ ಮಾಡುತ್ತೇನೆ. ಬ್ಯಾಂಕ್ ನ ಸ್ಲಿಪ್ ನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು

ಪಡಿಸುತ್ತೇನೆ. ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕ್ ದಲ್ಲಿ ಮರ್ಜ್ ಆಗಿರುವ ಕಾರಣ ಕ್ಲೀಯರೆನ್ಸ ಆಗಿರುವುದಿಲ್ಲ ಎಂದು ಹೇಳಿರುವುದಾಗಿ ಸಾಕ್ಷಿಯು ನುಡಿಯುತ್ತಾರೆ. ನನಗೆ ಬ್ಯಾಂಕ್ ನ ವ್ಯವಹಾರದ ಬಗ್ಗೆ ಮಾಹಿತಿ ಇರುತ್ತದೆ. ಬ್ಯಾಂಕ್ ಯಾವಾಗ ವಿಲೀನ ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಬ್ಯಾಂಕಿನ ಮೆಮೋ ಬಗ್ಗೆ ನನಗೆ ಮಾಹಿತಿ ಇರುತ್ತದೆ.

ದಿಃ14-07-2023 ರಂದು ಆರೋಪಿಗೆ ನೋಟಿಸು ನೀಡಿರುತ್ತೇನೆ. ದಿಃ15-07-2023 ರಂದು ನೋಟಿಸು ಆರೋಪಿಗೆ ತಲುಪಿದ್ದು ಇರುತ್ತದೆ. ದಿಃ01-08-2023 ರಂದು ಅವರು ನೋಟಿಸ್ ಗೆ ಉತ್ತರ ನೀಡಿರುತ್ತಾರೆ. 2023 ರಲ್ಲಿ ಆರೋಪಿಯು ನಮಗೆ ಯಾವುದೇ ಚೆಕ್ ಕೊಟ್ಟಿರುವುದಿಲ್ಲ ಹಾಗೂ ಅದು ಚೆಕ್ ಬೌನ್ಸ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಪ್ರಕರಣ ದಾಖಲಿಸುವ ಪೂರ್ವ ನಮ್ಮ ಇಲಾಖೆಯ ಪರವಾನಿಗೆ ಪಡೆದುಕೊಂಡಿರುವುದಿಲ್ಲ. ಆರೋಪಿಯು ಯಾವುದೇ ಒಂದು ಹಳೆ ಚೆಕ್ ನ್ನು ದುರುಪಯೋಗ ಮಾಡಿಕೊಂಡು ಆರೋಪಿತನಿಂದ ಹಣವನ್ನು ಕೀಳುವ ಸಲುವಾಗಿ ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಶ್ರೀ.ಕೆವಿಬಿ ರವರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.